SEPTEMBER 10,2024

ALL INDIA RADIO- DHARWAD

PRADESH SAMACHARA (KANNADA) 7:05 AM

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ವಿವೇಕಾದಿತ್ಯ ಕನಿಯಾಲ

<><><>

ಮುಖ್ಯಾಂಶಗಳು:

- ಪಶ್ಚಿಮಘಟ್ಟಗಳ ಸಂರಕ್ಷಣೆ; ಗಾಡ್ಗೀಳ್ ವರದಿ ಇಂದಿಗೂ ಪ್ರಸ್ತುತ – ಬಿ.ಎಂ ಕುಮಾರಸ್ವಾಮಿ.
- ‘ಸ್ವಚ್ಛ ಭಾರತ ಮಿ ’ನ್’; ಸ್ಥಳೀಯ ಸಂಸ್ಥೆಗಳು, ತ್ಯಾಜ್ಯ ವಿಲೇವಾರಿ ಮಾರ್ಗಸೂಚಿ ಪಾಲಿಸುವುದು, ಕಡ್ಡಾಯ – ನ್ಯಾಯಮೂರ್ತಿ ಸುಭಾ ್ ಅಡಿ.
- ರಾಷ್ಟ್ರೀಯ ಪೋಷಣ್ ಮಾಸಾಚರಣೆ; ವಿವಿಧೆಡೆ ತಾಯಂದಿರಿಗೆ ಜಾಗೃತಿ ಕಾರ್ಯಕ್ರಮ.
- “ಆತ್ಮಹತ್ಯೆ ಬಗ್ಗೆ ಅಭಿಪ್ರಾಯ ಬದಲಿಸುವುದು”, ಧ್ಯೇಯದೊಂದಿಗೆ, ಇಂದು ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಪಶ್ಚಿಮಘಟ್ಟಗಳ ಸಂರಕ್ಷಣೆ ಕುರಿತ, ಮಾಧವ್ ಗಾಡ್ಗೀಳ್ ವರದಿ ಇಂದಿಗೂ ಪ್ರಸ್ತುತ; ಅನುಷ್ಠಾನಕ್ಕೆ ಆದ್ಯತೆ ನೀಡದೇ, ವಿಧಿ ಇಲ್ಲ ಎಂದು ಹಿರಿಯ ಪರಿಸರ ಆರ್ಥಿಕ ತಜ್ಞ, ಬಿ.ಎಂ ಕುಮಾರಸ್ವಾಮಿ ಹೇಳಿದ್ದಾರೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಆಯೋಜಿಸಿದ್ದ, ಸಹ್ಯಾದ್ರಿ–2024, ಚಿಪ್ಕೋ ಆಂದೋಲನಕ್ಕೆ 50 ವರ್ಷ, ಅಪ್ಪಿಕೋ ಚಳವಳಿಗೆ 40 ವರ್ಷ ಒಂದು ಮೆಲುಕು: ಹಾಗೂ ಅರಣ್ಯಗಳು ಮತ್ತು ಸುಸ್ಥಿರ ಅಭಿವೃದ್ಧಿ ಕುರಿತ, ರಾಜ್ಯ ಮಟ್ಟದ ಚಿಂತನ–ಮಂಥನ ಕಾರ್ಯಾಗಾರದಲ್ಲಿ, ಗಾಡ್ಗೀಳ್ ವರದಿ ಪ್ರಸ್ತುತತೆ ಕುರಿತು, ಮಾತನಾಡಿದರು.

<><><>

ಬಿ.ಎಂ ಕುಮಾರಸ್ವಾಮಿ ಧ್ವನಿ 52 ಸೆಕೆಂದುಗಳು

<><><>

ಗದಗ ಜಿಲ್ಲೆ, ಮುಂಡರಗಿ ತಾಲೂಕು, ಕಪ್ಪತ್ತಗುಡ್ಡದ ನಂದಿವೇರಿಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಕಪ್ಪತ್ತಗುಡ್ಡ 80 ಸಾವಿರ ಎಕರೆ ವಿಸ್ತಾರ ಹೊಂದಿದ, ಸಂರಕ್ಷಿತ ಅರಣ್ಯ ಪ್ರದೇಶ. ಇದು, ಎಲ್ಲ ಕನ್ನಡಿಗರ ಪಾರಂಪರಿಕ

ಸ್ವತ್ತು ಎಂಬ ಭಾವ ಬಂಧದಲ್ಲಿ ಬೆಸೆಯಬೇಕಿದೆ ಎಂದರು.

<><><>

ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು, ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು, ಆದ್ಯತೆ ಮತ್ತು ಮುತುವರ್ಜಿ ವಹಿಸಬೇಕು ಎಂದು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ, ರಾಜ್ಯ ಸಮಿತಿ ಅಧ್ಯಕ್ಷ, ನ್ಯಾಯಮೂರ್ತಿ ಸುಭಾ ಷ್ ಅಡಿ ಸೂಚಿಸಿದ್ದಾರೆ.

ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ, ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ, ಅವರು, ಮಾತನಾಡಿದರು.

'ಸ್ವಚ್ಛ ಭಾರತ ಮಿ ಷನ್ ಯೋಜನೆ' ಮಾರ್ಗಸೂಚಿಗಳ ಅನ್ವಯ, ಸಂಗ್ರಹವಾದ ತ್ಯಾಜ್ಯ ವಿಲೇವಾರಿಗೆ ಕಾಳಜಿಯಿಂದ ಕ್ರಮ ಕೈಗೊಳ್ಳಬೇಕು. ಕಸ ವಿಲೇವಾರಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು, ಎಲ್ಲ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸಬೇಕು ಎಂದು, ನಿರ್ದೇಶಿಸಿದರು.

<><><>

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಸೇರಿದಂತೆ, ಇತರೆ ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಸಿ, ನಿರ್ಣಯಿಸಲು, ಇದೇ 17 ರಂದು, ಸಚಿವ ಸಂಪುಟ ಸಭೆ ಕಲಬುರಗಿಯಲ್ಲಿ ಆಯೋಜಿತವಾಗಿದೆ.

ಮಿನಿ ವಿಧಾನಸೌಧದ ಪ್ರಾದೇಶಿಕ ಆಯುಕ್ತರ ಕಾರ್ಯಾಲಯದ ಸಭಾಂಗಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ, ಸಚಿವ ಸಂಪುಟದ ಮಹತ್ವದ ಸಭೆ ಹತ್ತು ವ ರ್ಷಗಳ ಬಳಿಕ, ಕಲಬುರಗಿಯಲ್ಲಿ ನಡೆಯಲಿದೆ.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆ, ಪೂರ್ವಭಾವಿ ಮಾಹಿತಿ ನೀಡಿದರು.

ಯವಜನತೆಗೆ ಉದ್ಯೋಗ ಕಲ್ಪಿಸುವ 'ನಿಪುಣ – ಕರ್ನಾಟಕ' ಮಹತ್ವಾಕಾಂಕ್ಷೆ ಯೋಜನೆ ಅಕ್ಟೋಬರ್ ತಿಂಗಳಿನಲ್ಲಿ ಜಾರಿಗೊಳ್ಳಲಿದೆ. ಕಲಬುರಗಿಯಲ್ಲಿ 23 ನೇ ತಾರೀಖು ಮುಖ್ಯಮಂತ್ರಿಯವರು, ಕಲಬುರಗಿ ವಿಭಾಗ ಮಟ್ಟದ ಜನಸ್ಪಂದನ ಕಾರ್ಯಕ್ರಮ ನಡೆಸಲಿದ್ದಾರೆ ಎಂದರು.

<><><>

ಕೇಂದ್ರದ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನದಡಿ, ರಾಯಚೂರು ಜಿಲ್ಲೆಯ ಮಸ್ಕಿ ಹಾಗೂ ಸಿರಿವಾರ ತಾಲೂಕುಗಳನ್ನು, ಆಶೋತ್ತರ ತಾಲೂಕುಗಳನ್ನಾಗಿ ಗುರುತಿಸಿ, ಆರು ವಿಶೇಷ ಮಾನದಂಡಗಳಡಿ, ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ ಎಂದು, ಕೇಂದ್ರದ ಜಲಶಕ್ತಿ ಸಚಿವಾಲಯದ ಅಪರ ಕಾರ್ಯದರ್ಶಿ ಸುಬೋಧ್ ಯಾದವ್ ತಿಳಿಸಿದ್ದಾರೆ.

ಅವರು, ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಆಶೋತ್ತರ ಜಿಲ್ಲೆಯ, ಎರಡು ಮಹತ್ವಾಕಾಂಕ್ಷಿ ತಾಲೂಕಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು, ಕಟ್ಟಕಡೆಯ ಫಲಾನುಭವಿಗೆ ತಲುಪಿಸುವ ಪ್ರಯತ್ನವಾಗಿ, ಸಂಪೂರ್ಣತಾ ಅಭಿಯಾನದಡಿ, ದೇಶಾದ್ಯಂತ ಒಟ್ಟು ಐನೂರು ಹಾಗೂ ರಾಜ್ಯದ 7 ಜಿಲ್ಲೆಗಳ 14 ಘಟಕಗಳನ್ನು ಗುರುತಿಸಲಾಗಿದೆ ಎಂದರು.

ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯಿತಿ ಸಿ.ಇ.ಓ. ರಾಹುಲ್ ಪಾಂಡ್ವೆ ಮುಖ್ಯ ಯೋಜನಾಧಿಕಾರಿ ಡಾಕ್ಟರ್ ಟಿ.ರೋಣಿ ಸೇರಿದಂತೆ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು, ನಿಗದಿತ ಮಾನದಂಡ ಹಾಗೂ ಮಾರ್ಗಸೂಚಿಗಳ ಅನ್ವಯ, 100 ರಷ್ಟು ಗುರಿಯನ್ನು, ಕಳೆದ 55 ದಿನಗಳಲ್ಲಿ ತಲುಪಲಾಗಿದೆ ಎಂದು, ಮಾಹಿತಿ ನೀಡಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆ, ತಾಯಂದಿರಲ್ಲಿ ಸ್ತನ್ಯಪಾನದ ಮಹತ್ವ ಕುರಿತು ಜಾಗೃತಿ ಮೂಡಿಸುವುದು, ಪೋಷಣ ಮಾಸಾಚರಣೆ ಅಭಿಯಾನದ ಮುಖ್ಯ ಉದ್ದೇಶ ಎಂದು, ದಾವಣಗೆರೆ ಜಿಲ್ಲೆ, ಶಿಶು ಅಭಿವೃದ್ಧಿ ಸಹಾಯಕ ಯೋಜನಾಧಿಕಾರಿ ಪ್ರಿಯದರ್ಶಿನಿ ತಿಳಿಸಿದ್ದಾರೆ.

ದಾವಣಗೆರೆ ತಾಲೂಕು ಆಲೂರು ಗ್ರಾಮದಲ್ಲಿ ಆಯೋಜಿಸಿದ್ದ, ಪೋಷಣ್ ಮಾಸಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ, ಎನ್.ಆರ್.ಸಿ. ಕೇಂದ್ರಕ್ಕೆ ದಾಖಲಿಸಿ, 14 ದಿನಗಳ ಕಾಲ ಪೌಷ್ಟಿಕ ಆಹಾರ ನೀಡುವುದು ಹಾಗೂ ಸಮುದಾಯ ಆಧಾರಿತ ಚಟುವಟಿಕೆ ಆಯೋಜಿಸಿ, ತಾಯಂದಿರಿಗೆ ತಿಳಿವಳಿಕೆ ನೀಡುವುದು, ಆದ್ಯತೆ ಎಂದರು.

<><><>

ಗರ್ಭಿಣಿಯರು ಕಬ್ಬಿಣಾಂಶದ ಕೊರತೆ ನೀಗಿಸಿಕೊಂಡು, ಸುರಕ್ಷಿತ ಮಾತೃತ್ವ ಪಡೆಯಬೇಕು ಎಂದು, ಚಿತ್ರದುರ್ಗ ತಾಲೂಕು ಆರೋಗ್ಯಾಧಿಕಾರಿ ಡಾಕ್ಟರ್ ಬಿ.ವಿ.ಗಿರೀಶ ಕೋರಿದ್ದಾರೆ.

ಚಿತ್ರದುರ್ಗ ತಾಲೂಕಿನ ಹಾಯ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್.ಮಂಜುನಾಥ ಮಾತನಾಡಿ, ತಾಯಿ ಕಾರ್ಡ್‍ನ ಪುಟ 7 ಮತ್ತು 8 ರಲ್ಲಿ ನಮೂದಿಸಿದಂತೆ, ಗರ್ಭವತಿಯರು, 8 ಬಾರಿಯಾದರೂ ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ, ತಪಾಸಣೆ ಮಾಡಿಸಿಕೊಳ್ಳುವಂತೆ, ಮನವಿ ಮಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾಕ್ಟರ್ ಹ ´೯, ಒಟ್ಟು 44 ಗರ್ಭಿಣಿಯರಿಗೆ ಆರೋಗ್ಯ ಪರೀಕ್ಷೆ ನಡೆಸಿ, ಪ್ರೊಟೀನ್ ಪೌಡರ್, ಕಬ್ಬಿಣಾಂಶ ಹಾಗೂ ಕ್ಯಾಲ್ಶಿಯಂ ಮಾತ್ರೆ ನೀಡಿದರು.

<><><>

ಇಂದು ವಿಶ್ವ ಆತ್ಮಹತ್ಯೆ ತಡೆ ದಿನ.

"ಆತ್ಮಹತ್ಯೆ ಬಗ್ಗೆ ಅಭಿಪ್ರಾಯ ಬದಲಿಸುವುದು" ಎಂಬ ಧ್ಯೇಯದೊಂದಿಗೆ, ಆತ್ಮಹತ್ಯಾ ವಿರೋಧಿ ದಿನವನ್ನು, ಇಂದು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.

ಬೆಂಗಳೂರಿನ, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ – ನಿಮ್ಹಾನ್ಸ್‌ನಲ್ಲಿ, 'ಎನ್–ಸ್ಪ್ರೈಟ್' ಎಂಬ, ಆತ್ಮಹತ್ಯಾ ತಡೆ ಕೇಂದ್ರ ಇಂದು, ಕಾರ್ಯಾರಂಭಿಸಲಿದೆ.

ದೇಶಾದ್ಯಂತ ಆತ್ಮಹತ್ಯೆ ತಡೆ ಮತ್ತು ಆತ್ಮ ಹಾನಿ ನಿರ್ವಹಣೆಯ ಸಮಗ್ರ ತಂತ್ರಗಳನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ, ಇದು ಮಹತ್ವದ ಹೆಜ್ಜೆಯಾಗಿದೆ.

<><><>

ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಅಂಗವಾಗಿ, ಪದ್ಮಶ್ರೀ ಪ್ರೊಫೆಸರ್ ಸಿ.ಆರ್. ಚಂದ್ರಶೇಖರ ಅವರಿಂದ, ಇಂದು ಬೆಳಗ್ಗೆ 11 ಗಂಟೆಗೆ, ಧಾರವಾಡ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ – 'ಡಿಮ್ಹಾನ್ಸ್' ಸಭಾಂಗಣದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ. ಡಿಮ್ಹಾನ್ಸ್ ನಿರ್ದೇಶಕ ಡಾಕ್ಟರ್ ಸಿ. ಅರುಣಕುಮಾರ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ, ಆಯಾ ಜಿಲ್ಲೆಗಳಲ್ಲಿ ಇಂದು ಬೆಳಗ್ಗೆ 10.30 ಕ್ಕೆ, ಆತ್ಮಹತ್ಯೆ ತಡೆಗಟ್ಟುವಿಕೆ ಕುರಿತು, ಹಲವು ಅರ್ಥಪೂರ್ಣ ಜನ ಜಾಗ್ರತಿ ಕಾರ್ಯಕ್ರಮಗಳು ಆಯೋಜಿತವಾದ ವರದಿಗಳು ಬಂದಿವೆ.

<><><>

ಹೊಸ ದಿಲ್ಲಿಯ, ಡಾಕ್ಟರ್ ಶಾಮ ಪ್ರಸಾದ್ ಮುಖರ್ಜಿ ಕ್ರೀಡಾ ಸಂಕೀರ್ಣದಲ್ಲಿ ನಡೆದ, ಕೇಂದ್ರಿಯ ವಿದ್ಯಾಲಯ ಸಂಘಟನೆಯ, 53ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ, 14 ವರ್ಷದೊಳಗಿನ ಬಾಲಕಿಯರ ಈಜು ಸ್ಪರ್ಧೆಯಲ್ಲಿ, ಕರ್ನಾಟಕವನ್ನು ಪ್ರತಿನಿಧಿಸಿದ್ದ, ಬೆಂಗಳೂರಿನ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿನಿ, ವರ್ಷಾ ಶಶಿಧರ ರುಳಿ, ಒಂದು ಚಿನ್ನ ಹಾಗೂ ಎರಡು ಬೆಳ್ಳಿ ಪದಕಗಳನ್ನು ಗೆದ್ದು, ರಾಷ್ಟ್ರ ಮಟ್ಟದಲ್ಲಿ ವಿಶೇಷ ಸಾಧನೆ ಗೈಯ್ದಿದ್ದಾರೆ.

ಈಜು ಸ್ಪರ್ಧೆಯ ಇನ್ನೂರು ಮೀಟರ್‌ಗಳ ಬಟರ್ ಫ್ಲೈ ವಿಭಾಗದಲ್ಲಿ ಪ್ರಥಮ, ನಾಲ್ಕನೂರು ಮೀಟರ್‌ಗಳ ಫ್ರೀ ಸ್ಟೈಲ್ ವಿಭಾಗದಲ್ಲಿ ಹಾಗೂ ನಾಲ್ಕನೂರು ಮೀಟರ್‌ಗಳ ಫ್ರೀ ಸ್ಟೈಲ್ ರಿಲೇ ವಿಭಾಗದಲ್ಲಿ, ದ್ವಿತೀಯ ಸ್ಥಾನ ಗಳಿಸಿದ್ದಾರೆ.

ವರ್ಷಾ ಅವರು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಖುಷಿ ಹಂಚಿಕೊಂಡಿದ್ದಾರೆ.

<><><>

ವರ್ಷಾ ರುಳಿ ಧ್ವನಿ 47 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಹುಬ್ಬಳ್ಳಿ–ಪುಣೆ ನಡುವೆ ಸದ್ಯದಲ್ಲಿ, 'ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು' ಸಂಚರಿಸಲಿದೆ ಎಂದು, ಕೇಂದ್ರ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

'ಒಂದು ಗಿಡ – ತಾಯಿಯ ಹೆಸರಿನಲ್ಲಿ' ಅಭಿಯಾನದಡಿ, ಕಲಬುರಗಿ ವಿಮಾನ ನಿಲ್ದಾಣದ ಆವರಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಸಂಸದ ರಾಧಾಕೃ ಷ್ಣ ದೊಡ್ಡಮನಿ ಅವರು, ಸಸಿ ನೆಟ್ಟರು.

ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರದ, ಖಾಸಗಿ ಆಸ್ಪತ್ರೆಯಲ್ಲಿ ಗರ್ಭಪಾತ ಮಾಡಿದ ಖಚಿತ ಮಾಹಿತಿ ಹಿನ್ನೆಲೆ, ಜಿಲ್ಲಾ ಆರೋಗ್ಯಾಧಿಕಾರಿ ಸುವರ್ಣಾ ಕುಲಕರ್ಣಿ ಕಾನೂನು ಕ್ರಮ ಕೈಗೊಂಡಿದ್ದಾರೆ. (9)

ಚಿಕ್ಕಮಗಳೂರು ಕಾಫಿ ಮಂಡಳಿ ಕಚೇರಿಯಲ್ಲಿ ನಾಳೆ ರೈತರಿಗಾಗಿ, ವಿದೇಶಿ ಹಣ್ಣುಗಳ ಕುರಿತ ವಿಶೇಷ ತರಬೇತಿ ಕಾರ್ಯಾಗಾರ ಜರುಗಲಿದೆ.

ಮಂಗಳೂರಿನ ಸಂಘ ನಿಕೇತನದಲ್ಲಿ ಆಯೋಜಿತ, 77 ನೇ ವ ´ದ, ಸಾರ್ವಜನಿಕ ಗಣೇಶೋತ್ಸವದಲ್ಲಿ, ಕ್ರೈಸ್ತ ಬಾಂಧವರು ಪಾಲ್ಗೊಂಡು, ಸೌಹಾರ್ದತೆ ಸಾರಿದರು. (10)

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಪಶ್ಚಿಮಘಟ್ಟಗಳ ಸಂರಕ್ಷಣೆ; ಗಾಡ್ಗೀಳ್ ವರದಿ ಇಂದಿಗೂ ಪ್ರಸ್ತುತ – ಬಿ.ಎಂ ಕುಮಾರಸ್ವಾಮಿ.

- ‘ಸ್ವಚ್ಛ ಭಾರತ ಮಿ ´ನ್’; ಸ್ಥಳೀಯ ಸಂಸ್ಥೆಗಳು, ತ್ಯಾಜ್ಯ ವಿಲೇವಾರಿ ಮಾರ್ಗಸೂಚಿ ಪಾಲಿಸುವುದು, ಕಡ್ಡಾಯ – ನ್ಯಾಯಮೂರ್ತಿ ಸುಭಾ ´ ಅಡಿ.

- ರಾಷ್ಟ್ರೀಯ ಪೋಷಣ್ ಮಾಸಾಚರಣೆ; ವಿವಿಧೆಡೆ ತಾಯಂದಿರಿಗೆ ಜಾಗೃತಿ ಕಾರ್ಯಕ್ರಮ.
- “ಆತ್ಮಹತ್ಯೆ ಬಗ್ಗೆ ಅಭಿಪ್ರಾಯ ಬದಲಿಸುವುದು”, ಧ್ಯೇಯದೊಂದಿಗೆ, ಇಂದು ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>